# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವಿಶೇಷ ಆಯುಕ್ತರು (ಅರಣ್ಯ, ಪರಿಸರ ಮತ್ತು ಹವಾಮಾನ ವೈಪರೀತ್ಯ) ರವರ ಕಛೇರಿ, 3ನೇ ಮಹಡಿ, ಎನ್.ಆರ್ ವೃತ್ತ, ಬೆಂಗಳೂರು-560002

ಸಂಖ್ಯೆ:-ವಿ.ಆ(ಅ.ಪ.ಹ.ವೈ)/ಪಿಆರ್/2466/2024-25 ದಿನಾಂಕ: ~~29~~ 30-11-2024

## ಪತ್ರಿಕಾ ಪ್ರಕಟಣೆ

ವಿಷಯ:- ಕೆರೆ ಒತ್ತುವರಿ ಸರ್ವೆ ಹಾಗೂ ಒತ್ತುವರಿ ತೆರವುಗೊಳಿಸುವ ವಿಷಯಕ್ಕೆ ಸಂಬಂಧಿಸಿದಂತೆ

**********

ಮಾನ್ಯ ಉಚ್ಚನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ:38401/2014 ರ ಆದೇಶದಂತೆ ಪಾಲಿಕೆ ವಶದಲ್ಲಿರುವ ಕೆರೆಗಳ ಒತ್ತುವರಿ ತೆರವಿಗೆ ಒತ್ತುವರಿ ಸರ್ವೆ ಹಾಗೂ ತೆರವುಗೊಳಿಸುವ ಕಾರ್ಯಜಾರಿಯಲ್ಲಿರುತ್ತದೆ. ಇದುವರೆವಿಗೂ 202 ಕೆರೆಗಳ ಪೈಕಿ 162 ಕೆರೆಗಳ ಸರ್ವೆ ಕಾರ್ಯವು ಪೂರ್ಣಗೊಂಡಿದ್ದು ಈ ಪೈಕಿ ಒಟ್ಟು 49 ಕೆರೆಗಳು ಒತ್ತುವರಿ ಮುಕ್ತವಾಗಿದ್ದು ಇವುಗಳ ಪೈಕಿ 23 ಕೆರೆಗಳು ಕೇವಲ ಸರ್ಕಾರಿ ಒತ್ತುವರಿಯನ್ನು ಹೊಂದಿರುತ್ತವೆ. ಮಾನ್ಯ ಉಚ್ಚನ್ಯಾಯಾಲಯದ ಆದೇಶದಂತೆ ವಲಯಗಳೊಂದಿಗೆ ಸಮನ್ವಯ ಸಾಧಿಸಿ ಒತ್ತುವರಿಗಳನ್ನು ತೆರವುಗೊಳಿಸಲು ಮಾನ್ಯ ಮುಖ್ಯ ಆಯುಕ್ತರುವರು ಸೂಚನೆಯಂತೆ ಕ್ರಮವಹಿಸಲಾಗಿದೆ.

ಇದುವರೆವಿಗೆ ಮೇಲಿನ ಕೆರೆಗಳ ಒತ್ತುವರಿ ತೆರವಿನ ಭಾಗವಾಗಿ ಈ ಕೆಳಕಂಡಂತೆ ಕೆರೆಗಳು ವಿಭಾಗದಿಂದ ಪ್ರಗತಿಯನ್ನು ಸಾಧಿಸಲಾಗಿದೆ ವಿವರಗಳು ಈ ಕೆಳಕಂಡಂತಿದೆ.

| ಕ್ರ.ಸಂ | ವಲಯ | ಕೆರೆಯ ಹೆಸರು | ಸಾಧಿಸಿರುವ ಪ್ರಗತಿ | ಪ್ರಸ್ತುತ ಅಂದಾಜು ಮಾರುಕಟ್ಟೆ ದರ |
|---|---|---|---|---|
| 01 | ಮಹದೇವಪುರ ವಲಯ | ದೊಡ್ಡನೆಕ್ಕುಂದಿ ಕೆರೆ | ಮಹದೇವಪುರ ವಲಯದ ದೊಡ್ಡನೆಕ್ಕುಂದಿ ಕೆರೆಯ 02 ಎಕರೆ 06 ಗುಂಟೆ ಖಾಲಿ ಪ್ರದೇಶವನ್ನು ಒತ್ತುವರಿ ಮುಕ್ತಗೊಳಿಸಿ ತಂತಿ ಬೇಲಿಯನ್ನು ಅಳವಡಿಸಲು ಕ್ರಮಕೈಗೊಳ್ಳಲಾಗಿದೆ. | ಸದರಿ ಜಾಗದ ಪ್ರಸ್ತುತ ಮಾರುಕಟ್ಟೆ ದರವು ರೂ.75.00 ಕೋಟಿಗಳಾಗಿರುತ್ತದೆ |
| 02 | ಪೂರ್ವವಲಯ | ಕಗ್ಗದಾಸಪುರ ಕೆರೆ | ಕಗ್ಗದಾಸಪುರ ಕೆರೆಯ 2.5 ಗುಂಟೆ ಜಮೀನನಲ್ಲಿದ್ದ ಶೆಡ್‌ನ್ನು ತೆರವುಗೊಳಿಸಿ ಹಾಗೂ 22.5 ಗುಂಟೆ ಖಾಲಿ ಜಾಗಕ್ಕೆ ತಂತಿ ಬೇಲಿಯನ್ನು ಅಳವಡಿಸಲು ಕ್ರಮವಹಿಸಲಾಗಿದೆ. | ಸದರಿ ಜಾಗದ ಪ್ರಸ್ತುತ ಮಾರುಕಟ್ಟೆ ದರವು ರೂ.22.50 ಕೋಟಿಗಳಾಗಿರುತ್ತದೆ |
| 03 | ಬೊಮ್ಮನಹಳ್ಳಿ ವಲಯ | ಕೋಣನಕುಂಟೆ ಕೆರೆ | ಬೊಮ್ಮನಹಳ್ಳಿ ವಲಯದ ಕೋಣನಕುಂಟೆ ಕೆರೆಯ ಖಾಲಿಜಾಗದ 30 ಗುಂಟೆ ಜಾಗವನ್ನು ವಶಕ್ಕೆ ಪಡೆಯಲಾಗಿದ್ದು ತಂತಿ ಬೇಲಿಯನ್ನು ಅಳವಡಿಸಲಾಗಿದೆ. | ಸದರಿ ಜಾಗದ ಪ್ರಸ್ತುತ ಮಾರುಕಟ್ಟೆ ದರವು ರೂ.30.00 ಕೋಟಿಗಳಾಗಿರುತ್ತದೆ |
| 04 | ಬೊಮ್ಮನಹಳ್ಳಿ ವಲಯ | ಅರೆಕೆರೆ | ಅರೆಕೆರೆ ಕೆರೆಯಲ್ಲಿ ಒತ್ತುವರಿಯಾಗಿದ್ದ 12 ಗುಂಟೆ ಜಾಗವನ್ನು ವಶಕ್ಕೆ ಪಡೆಯಲಾಗಿದ್ದು ತಂತಿ ಬೇಲಿಯನ್ನು ಅಳವಡಿಸಲಾಗಿದೆ. | ಸದರಿ ಜಾಗದ ಪ್ರಸ್ತುತ ಮಾರುಕಟ್ಟೆ ದರವು ರೂ.12 ಕೋಟಿಗಳಾಗಿರುತ್ತದೆ. |

| | | | | |
|---|---|---|---|---|
| 05 | ಬೊಮ್ಮನಹಳ್ಳಿ ವಲಯ | | ಬೊಮ್ಮನಹಳ್ಳಿ ವಲಯದ ಸುಬ್ಬರಾಯನ ಕೆರೆಯ 24 ಗುಂಟೆ ಖಾಲಿ ಜಾಗವನ್ನು ಮತ್ತು 4 ಗುಂಟೆ ಶೀಟ್ ಜಾಗವು ಸೇರಿದಂತೆ ಒಟ್ಟು 28 ಗುಂಟೆ ಜಾಗವನ್ನು ವಶಕ್ಕೆ ಪಡೆಯಲಾಗಿದ್ದು ತಂತಿ ಬೇಲಿಯನ್ನು ಅಳವಡಿಸಲಾಗಿದೆ. | ಸದರಿ ಜಾಗದ ಪ್ರಸ್ತುತ ಮಾರುಕಟ್ಟೆ ದರವು ರೂ.15.00 ಕೋಟಿಗಳಾಗಿರುತ್ತದೆ |
| 06 | ಮಹದೇವಪುರ ವಲಯ | ವಿಭೂತಿಪುರ | ಮಹದೇವಪುರ ವಲಯದ ವಿಭೂತಿಪುರ ಕೆರೆಯಲ್ಲಿ ಒತ್ತುವರಿಯಾಗಿದ್ದ 08 ಗುಂಟೆ ಪ್ರದೇಶವನ್ನು ತೆರವುಗೊಳಿಸಲಾಗಿರುತ್ತದೆ. | ಸದರಿ ಜಾಗದ ಪ್ರಸ್ತುತ ಮಾರುಕಟ್ಟೆ ದರವು ರೂ.8.00 ಕೋಟಿಗಳಾಗಿರುತ್ತದೆ |
| 07 | ಯಲಹಂಕ ವಲಯ | | ಯಲಹಂಕ ವಲಯದಲ್ಲಿ 07 ಕೆರೆಗಳಲ್ಲಿ ಒತ್ತುವರಿಗೊಂಡಿದ್ದ 2 ಎಕರೆ 13 ಗುಂಟೆ ಪ್ರದೇಶವನ್ನು ತೆರವುಗೊಳಿಸಲಾಗಿರುತ್ತದೆ | ಸದರಿ ಜಾಗದ ಪ್ರಸ್ತುತ ಮಾರುಕಟ್ಟೆ ದರವು ರೂ.80.00 ಕೋಟಿಗಳಾಗಿರುತ್ತದೆ |

ಒಟ್ಟಾರೆಯಾಗಿ ರೂ.245.00 ಕೋಟಿಗಳ ಮೌಲ್ಯದ 7 ಎಕರೆ 05 ಗುಂಟೆ ಪ್ರದೇಶವನ್ನು ಒತ್ತುವರಿಯನ್ನು ತೆರವುಗೊಳಿಸಿ ತಂತಿಬೇಲಿಯನ್ನು ಅಳವಡಿಸಲು ಕ್ರಮಕೈಗೊಳ್ಳಲಾಗಿದೆ.

ಮೇಲಿನ ವಿಷಯವನ್ನು ಪ್ರತಿಕೆಗಳಲ್ಲಿ ಪ್ರಕಟಿಸಲು ಕೋರಿದೆ.

**ರವರಿಗೆ,**
ಸಾರ್ವಜನಿಕ ಸಂಪರ್ಕಾಧಿಕಾರಿಗಳು,
ಕೇಂದ್ರ ಕಛೇರಿ ಆವರಣ, ಎನ್,ಆರ್,ವೃತ್ತ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು.

Preeti Gehlot 30/11/2024
**ವಿಶೇಷ ಆಯುಕ್ತರು**
**ಅರಣ್ಯ, ಪರಿಸರ ಮತ್ತು ಹವಾಮಾನ ವೈಪರೀತ್ಯ ನಿರ್ವಹಣೆ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ಪ್ರತಿಯನ್ನು:**
1. ಮಾನ್ಯ ಆಡಳಿತಗಾರರು ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
2. ಮಾನ್ಯ ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ ರವರ ಅವಗಾಹನೆಗಾಗಿ ತರಲು ಅವರ ಆಪ್ತ ಶಾಖೆಗೆ ಸಲ್ಲಿಸಿದೆ.
3. ಕಛೇರಿ ಪ್ರತಿ.